



ಇದು ಟರ್ಕಿ ದೇಶದ ದುರದೃಷ್ಟವೇ ಸರಿ. ಕಳೆದ ಫೆಬ್ರುವರಿ 6ರ ಬೆಳಗಿನ ಜಾವ ಸಂಭವಿಸಿದ ತೀವ್ರ ಭೂಕಂಪದಿಂದಾಗಿ ಸಾವಿರಾರು ಜನ ಮೃತಪಟ್ಟ ವರದಿ–ಚಿತ್ರಗಳು ಮಾಧ್ಯಮಗಳ ತುಂಬ ಹರಿದಾಡುತ್ತಿವೆ. ನಮ್ಮ ದೇಶದ ವಿಪತ್ತು ನಿರ್ವಹಣಾ ಪಡೆ ಅಲ್ಲಿ ನೆರವಿಗೆ ನಿಂತಿದೆ. ಕಟ್ಟಡಗಳ ಅವಶೇಷಗಳಡಿ ಇನ್ನೂ ಸಾವಿರಾರು ಜನ ಸಿಲುಕಿರುವ ಶಂಕೆ ಇದೆ. ಪರಿಹಾರ ಕಾರ್ಯ ಮುಂದುವರೆದಂತೆಲ್ಲ ಸಾವಿನ ಚೀತ್ಕಾರ, ಆಕ್ರಂದನಗಳು ಇಮ್ಮಡಿಯಾಗುತ್ತಿವೆ. ಎಳೆಯ ಕಂದಮ್ಮಗಳು, ವಯೋವೃದ್ಧರು, ದುಡಿಯುವ ಕೈಗಳು, ಕೆಲಸಕ್ಕಾಗಿ ಕಾಯುತ್ತಿದ್ದ ಯುವಕರು, ಭವ್ಯತೆ ಮೆರೆಯುತ್ತಿದ್ದ ಸುಂದರ ಕಟ್ಟಡಗಳೆಲ್ಲಾ ಮಣ್ಣಲ್ಲಿ ಮಣ್ಣಾಗಿ ಹೋದದ್ದಕ್ಕೆ ಇಡೀ ಜಗತ್ತೇ ಹನಿಗಣ್ಣಾಗಿದೆ. ಪ್ರಾಣ–ಆಸ್ತಿ ನಾಶದಿಂದ ಕಂಗೆಟ್ಟಿರುವ ಟರ್ಕಿ ಮತ್ತು ಸಿರಿಯಾಗಳು ವಿದೇಶಗಳ ನೆರವನ್ನು ಕೃತಜ್ಞತೆಯಿಂದ ಸ್ವೀಕರಿಸುತ್ತಿವೆ.